# ನಿರ್ಮಾಪಕ ಜಯಣ್ಣ – ಬೋಗೇಂದ್ರ ಅವರ ಕನ್ನಡ ಪ್ರೇಮ.

**ಶಿವರಾಜು ಎನ್.**
ಸಂಶೋಧನಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

**Article Link: https://aksharasurya.com/2023/11/shivaraju-n-7/**

## ABSTRACT:

ಪಂಚ ದ್ರಾವಿಡ ಭಾಷೆಗಳಲ್ಲಿ ಕನ್ನಡ ಭಾಷೆಯು ಅತಿ ಪ್ರಾಚೀನ ಭಾಷೆಯಾಗಿದ್ದು, ಕನಿಷ್ಠ 2 ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಸರಿ ಸುಮಾರು 2 ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡ ಭಾಷೆ ಒಂದರ್ಥದಲ್ಲಿ ಅವನತಿಯ ಅಂಚಿನಲ್ಲಿದೆ. ದಿನೇ ದಿನೇ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬೆಂಗಳೂರಿನಂತಹ ಮಹಾನಗರದಲ್ಲಿ ಕನ್ನಡಿಗರು ಭಾಷಿಕ ಅಲ್ಪಸಂಖ್ಯಾತರಾಗಿದ್ದಾರೆ. ಹೊರ ರಾಜ್ಯದಿಂದ ಬಂದವರು ಕನ್ನಡ ಭಾಷೆ ಕಲಿಯಲು ಆಸಕ್ತಿ ತೋರುತ್ತಿಲ್ಲ. ಪೋಷಕರು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ ಉದ್ಯೋಗ ದೊರೆಯುವುದಿಲ್ಲ ಎಂಬ ಕಾರಣದಿಂದ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸಲು ಇಷ್ಟ ಪಡುವುದಿಲ್ಲ. ಆಂಗ್ಲ ಮಾಧ್ಯಮದ ಪೈಪೋಟಿ, ಪರಭಾಷಿಕರ ಹಾವಳಿ, ಸರ್ಕಾರದ ಕಠಿಣ ನೀತಿ ನಿಯಮಗಳು, ಆಡಳಿತದಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರಗಳು ವಿಫಲವಾಗಿರುವುದು ಇತ್ಯಾದಿ ಕಾರಣಗಳಿಂದ ಕನ್ನಡ ಭಾಷೆ ಅಳಿವಿನಂಚಿನಲ್ಲಿದೆ. ಯಾವುದೇ ಒಂದು ಭಾಷೆಯ ಅಸ್ತಿತ್ವದ ಉಳಿವಿಗಾಗಿ ಶ್ರಮಿಸುವ ಮಾಧ್ಯಮಗಳ ಪೈಕಿ ದೃಶ್ಯ ಮಾಧ್ಯಮಗಳ ಪಾತ್ರ ಮಹತ್ವಪೂರ್ಣವಾದದ್ದು. ನಿರ್ಮಾಪಕ ಜಯಣ್ಣ–ಬೋಗೇಂದ್ರರು ಕನ್ನಡ ಚಿತ್ರರಂಗಕ್ಕೆ ಸಲ್ಲಿಸಿರುವ ಕೊಡುಗೆಯನ್ನು ಕುರಿತು ಬೆಳಕು ಚೆಲ್ಲುವುದು ನನ್ನ ಲೇಖನ ರಚನೆಯ ಹಿಂದಿನ ಉದ್ದೇಶ.

## KEY WORDS:

ಮಾಧ್ಯಮ, ಸಿನಿಮಾ, ಸ್ಪರ್ಧೆ, ವಿತರಣೆ, ಕನ್ನಡ, ಭಾಷೆ, ನಿರ್ಮಾಣ, ತಾಂತ್ರಿಕತೆ.

ನಮ್ಮ ನಾಡು ಕನ್ನಡ ನಾಡು, ನಮ್ಮ ಭಾಷೆ ಕನ್ನಡ ಭಾಷೆ, ನಮ್ಮ ರಾಜ್ಯ ಕರ್ನಾಟಕ, ನಮ್ಮ ಭಾಷೆಯ, ನಮ್ಮ ರಾಜ್ಯದ , ನಮ್ಮ ಸಂಸ್ಕೃತಿಯ ಉಳಿವಿಗಾಗಿ ಹಲವಾರು ಮಹನೀಯರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಭಾಷಾಭಿಮಾನಕ್ಕೆ ಪ್ರಾಣತ್ಯಾಗ ಮಾಡಿದವರು ಹೆಚ್ಚಿನ ಮಂದಿ.ಒಂದು ಭಾಷೆಯನ್ನು ಮಾತನಾಡುವ ಜನರನ್ನೆಲ್ಲಾ ಒಂದುಗೂಡಿಸಿ ಒಂದು ಸ್ವತಂತ್ರ ರಾಜ್ಯವನ್ನು ನಿರ್ಮಿಸುವುದು ಸವಾಲಿನ ಕೆಲಸವೇ ಸರಿ.ಕರ್ನಾಟಕ ಏಕೀಕರಣ ಆಗಿ 31–10–2023 ಕ್ಕೆ 66 ವರ್ಷಗಳಾದವು.ಯಾವುದೇ ಒಂದು ರಾಜ್ಯ ಸುರಕ್ಷಿತವಾಗಿರಬೇಕಾದರೆ ಮೊದಲ ಆ ರಾಜ್ಯದ ಗಡಿಸಮಸ್ಯೆಯನ್ನು ಬಗೆಹರಿಸಿದ ನಂತರ ಉಳಿದ ಸಮಸ್ಯೆಗಳನ್ನು ಬಗೆಹ–ರಿಸಬೇಕು. "ಆಡಳಿತ, ಆರ್ಥಿಕ ವಹಿವಾಟುಗಳು ಇತ್ಯಾದಿಗಳ ಜನಬಳಕೆಯನ್ನು ತಪ್ಪಿಸಿಬಿಟ್ಟರೆ ಸಾಕು, ಕನ್ನಡವನ್ನು ಕೊಲ್ಲುವುದಕ್ಕೆ ಬೇರೆ ಸಮರ್ಥ ವಿಧಾನ ಬೇಕಿಲ್ಲ. ಕನ್ನಡದಲ್ಲಿ ಎಂಥ ಮಹಾ ಸಾಹಿತಿಗಳಿದ್ದರೂ ಕನ್ನಡಕ್ಕೆ ಎಷ್ಟು ಜ್ಞಾನ ಪೀಠ ಪ್ರಶಸ್ತಿಗಳು ಬಂದಿದ್ದರೂ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಎಷ್ಟು ವಿಜೃಂಭಣೆಯಿಂದ ಮಾಡಿದರೂ ಜನ ಬಳಸುವುದನ್ನು ನಿಲ್ಲಿಸುತ್ತಿದ್ದಂತೆಯೇ ಆ ಭಾಷೆಯ ಅವಸಾನ ಶುರುವಾಗುತ್ತದೆ. ಇದಕ್ಕೆ ಸಂಸ್ಕೃತದ ಜ್ವಲಂತ ಉದಾಹರಣೆ ನಮ್ಮ ಕಣ್ಣೆದುರೇ ಇದೆ."[1] ಕಥೆ, ಕಾದಂಬರಿಗಳಿಂದ ಒಂದು ಭಾಷೆಯ ಅಸ್ತಿತ್ವ ಉಳಿಯುವುದಿಲ್ಲ. ಭಾಷೆಯ ಅಸ್ತಿತ್ವ ಉಳಿಯುವುದು ಜನ ಬಳಕೆಯಿಂದ.

ಇಂದು ಕನ್ನಡಿಗರು ಕರ್ನಾಟಕದಲ್ಲಿ ಮಾತ್ರವಲ್ಲದೆ ಹೊರ ರಾಜ್ಯ, ಹೊರ ದೇಶಗಳಲ್ಲಿ ಕನ್ನಡದ ಕಂಪನ್ನು ಹರಡುತ್ತಿರುವುದು ಹೆಮ್ಮೆಯ ಸಂಗತಿ.1950 ರ ಪೂರ್ವದಲ್ಲಿ ಕನ್ನಡಿಗರ ಪರಿಸ್ಥಿತಿ ತುಂಬಾ ಶೋಚನೀಯವಾಗಿತ್ತು."ಕನಾಟಕ ಹ–ರಿದು ಹಂಚಿಹೋಗಿ ಸುಮಾರು 800 ವರ್ಷಗಳಷ್ಟು ದೀರ್ಘಕಾಲ ಪ್ರತ್ಯೇಕವಾಗಿಯೇ ಉಳಿದಿದ್ದ ಕನ್ನಡಿಗರು, ಬೇರೆಬೇರೆ ಆಡಳಿತ ವಿಭಾಗದಲ್ಲಿದ್ದುಕೊಂಡು ಮಾತೃಭಾಷೆಯನ್ನು ಮರೆಯಬೇಕಾದ ಸ್ಥಿತಿಯಲ್ಲಿದ್ದ ಕನ್ನಡಿಗರು ಮೊದಲು ಹೋರಾಡಿದ್ದು ಭಾರತದ ಸ್ವಾತಂತ್ರ್ಯಕ್ಕಾಗಿ, ಅನಂತರ ಕರ್ನಾಟಕ ಏಕೀಕರಣಕ್ಕೂ ಅಷ್ಟೇ ನಿಷ್ಠ ಮತ್ತು ಪ್ರಾಮಾಣಿಕತೆಯಿಂದ ಶ್ರಮಿಸಿದ ಕನ್ನಡ ಜನ ಪರಹಿತಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಳ್ಳುವ ಮನೋಭಾವದವರು."[2] ಏಕೀಕರಣ ಕಾಲದಲ್ಲಿ ಇದ್ದಂತಹ ಸುಸ್ಥಿತಿಯಲ್ಲಿ ಕನ್ನಡ ಭಾಷೆ, ಕನ್ನಡಿಗರು ಇಲ್ಲ. ಈಗ ಕನ್ನಡ ಭಾಷೆ, ಪರಭಾಷಾ ಸಂಸ್ಕೃತಿಯ ಹಾವಳಿ, ಕನ್ನಡ ನಾಡಿಗೆ ಪರಭಾಷಿಕರ ಪ್ರವೇಶ, ಹಾಗೂ ಆಂಗ್ಲ ಮಾಧ್ಯಮದ ಸ್ಪರ್ಧೆಯಿಂದಾಗಿ, ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದೆ.ಯಾವುದೇ ಒಂದು ಭಾಷೆಯ ಅಸ್ತಿತ್ವದ ಉಳಿವಿಗಾಗಿ ದುಡಿಯುವ ಮಾಧ್ಯಮಗಳಲ್ಲಿ ಸಿನಿಮಾ ಮಾಧ್ಯಮವೂ ಸಹ ಒಂದು.

ನೆರೆಯ ತಮಿಳುನಾಡು, ಆಂಧ್ರ, ತೆಲಂಗಾಣ, ಕೇರಳ ರಾಜ್ಯಗಳಲ್ಲಿ ಆ ರಾಜ್ಯದ ಭಾಷೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆಯಾ ರಾಜ್ಯಗಳ ಚಲನಚಿತ್ರ ರಂಗದ ಕೊಡುಗೆಯೂ ಸಾಕಷ್ಟಿದೆ. ಆಡಳಿತ ಹಾಗೂ ಶಿಕ್ಷಣದಲ್ಲಿ ಕನ್ನಡ ಭಾಷೆಯ ಅನುಷ್ಠಾನವನ್ನು ಕುರಿತು ರಾಷ್ಟ್ರಕವಿ ಕುವೆಂಪು ಅವರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. "ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು. ಆಡಳಿತ ಭಾಷೆಯಾಗಬೇಕು. ಎಲ್ಲಾ ಹಂತಗಳಲ್ಲೂ ಶಿಕ್ಷಣ ಮಾಧ್ಯಮವಾಗಬೇಕು. ಸಕಲ ಶಾಸ್ತ್ರಗಳು ಕನ್ನಡದಲ್ಲಿ ಭೋದಿಸಲ್ಪಡಬೇಕು. ನಾವು ಈ ಗುರಿಯನ್ನು ಸಾಧಿಸಬೇಕಿದೆ."[3] ಈ ದಾರಿಯು ದುರ್ಗಮವಾಗಿದೆ ಎಂಬುದು ವಾಸ್ತವ.

ಕನ್ನಡ ಚಿತ್ರರಂಗವೂ ಇಂದು ದುಸ್ಥಿತಿಯಲ್ಲಿದ್ದರೂ, ಆರಂಭದಲ್ಲಿ ಭಾರತದ ಎಲ್ಲಾ ಭಾಷೆಯ ಚಿತ್ರರಂಗಗಳಿಗೂ ಮಾದರಿಯಾಗಿತ್ತು.ಕನ್ನಡ ಚಿತ್ರರಂಗದ ಏಳಿಗೆಗಾಗಿ ಹಲವಾರು ಮಹನೀಯರು ಶ್ರಮಿಸಿದ್ದಾರೆ. ಅವರುಗಳಲ್ಲಿ ಮುಖ್ಯವಾದವರೆಂದರೆ, ಜಿ.ವಿ. ಅಯ್ಯರ್, ಶಂಕರ್‌ಸಿಂಗ್, ಡಾ.ರಾಜಕುಮಾರ್, ಎಂ.ಪಿ. ಶಂಕರ್, ಶಂಕರ್‌ನಾಗ್, ಅನಂತನಾಗ್, ದ್ವಾರಕೀಶ, ಡಾ.ವಿಷ್ಣುವರ್ಧನ್, ಡಾ.ಅಂಬರೀಶ್, ಎನ್. ವೀರಸ್ವಾಮಿ ಮೊದಲಾದವರು. ಕನ್ನಡ ಚಿತ್ರರಂಗದ ಏಳಿಗೆಗಾಗಿ ಶ್ರಮಿಸಿದ ನಿರ್ಮಾಪಕರಲ್ಲಿ ಮುಖ್ಯವಾಗಿ ಹೆಸರಿಸಬೇಕಾದ ನಿರ್ಮಾಪಕರೆಂದರೆ, ದ್ವಾರಕೀಶ್, ಎನ್. ವೀರಾಸ್ವಾಮಿ, ಕೆ.ಸಿ.ಎನ್. ಗೌಡ, ಪಾರ್ವತಮ್ಮ ರಾಜಕುಮಾರ್, ರಾಮು, ರಾಕ್‌ಲೈನ್ ವೆಂಕಟೇಶ್, ಜಯಣ್ಣ – ಬೊಗೇಂದ್ರ ಮೊದಲಾದವರು.

ಕಳೆದ 20 ವರ್ಷಗಳ ಕನ್ನಡ ಚಿತ್ರರಂಗದ ಬೆಳವಣಿಗೆಯನ್ನು ಅವಲೋಕನ ಮಾಡಿದಾಗ ನಿರ್ಮಾಪಕರಾಗಿ ಜಯಣ್ಣ–ಬೊಗೇಂದ್ರರವರು ಕನ್ನಡ ಚಲನಚಿತ್ರ ನಿರ್ಮಾಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಮಹತ್ವ ಪೂರ್ಣವಾದದ್ದು 2003 ರ ಆಗಸ್ಟ್ 15 ರಂದು ತೆರೆಕಂಡ ಮಾಜಿ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರ ನಿರ್ಮಾಣದ "ಚಂದ್ರಚಕೋರಿ" ಸಿನಿಮಾವನ್ನು ವಿತರಣೆ ಮಾಡುವ ಅವರು ಕನ್ನಡ ಚಲನಚಿತ್ರ ರಂಗ ಪ್ರವೇಶಿಸಿದರು. ಅಲ್ಲಿಂದ ಇಲ್ಲಿಯ ತನಕ ಅವರು ಹಲವಾರು ಮಹತ್ವ ಪೂರ್ಣವಾದಂತಹ ಕೊಡುಗೆಯನ್ನು ಕನ್ನಡ ಚಿತ್ರರಂಗಕ್ಕೆ ನೀಡಿದ್ದಾರೆ.

ಸಿನಿಮಾ ಒಂದು ಪ್ರಬಲ ಸಾಮಾಜಿಕ ಮಾಧ್ಯಮ ಎಂಬ ವಿಚಾರವನ್ನು ಚಿಂತಕ ಮೊಗಳಿ ಗಣೇಶ್ ಅವರು ತಮ್ಮ "ಕನ್ನಡ ಚಲನಚಿತ್ರ ಇತಿಹಾಸ ಭಾಗ 01" ಕೃತಿಯಲ್ಲಿ ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. "ಸಿನಿಮಾ ಮಾಧ್ಯಮ ಒಂದು ಪರಿಣಾಮಕಾರಿ ಅಸ್ತ್ರ. ಸಾಹಿತ್ಯ ಮಾಡಬಹುದಾದಕ್ಕಿಂತ ಸಿನಿಮಾ

ಸಮಾಜದ ಮೇಲೆ ಎಲ್ಲಾ ಬಗೆಯಾದ ಪ್ರಭಾವಗಳನ್ನು ಮಾಡಬಲ್ಲದು.ಕನ್ನಡ ಚಳುವಳಿಗಳಿಗೆ ಸಿನಿಮಾ ಲೋಕವು ನಿರಂತರವಾಗಿ ಸ್ಪಂಧಿಸುತ್ತಲೇ ಬಂದಿದೆ.ಈ ಹಿನ್ನೆಲೆಯಲ್ಲಿ ಕನ್ನಡ ಸಿನಿಮಾ ಪ್ರಪಂಚವು ದೊಡ್ಡದೊಂದು ಉಧ್ಯಮವು ಆಗಿ ಸಾಮಾಜಿಕ ಶಕ್ತಿಯು ಆಗಿದೆ ಎಂಬುದು ಗಮನಾರ್ಹವಾದುದು.ಕನ್ನಡ ನಾಡಿನ ಬೆಳವಣಿಗೆಯ ಭಾಗವೇ ಆಗಿರುವ ಸಿನಿಮಾಕ್ಕೆ ಭವಿಷ್ಯದಲ್ಲಿ ಹೆಚ್ಚಿನ ಹೊಣೆಗಾರಿಕೆ ಇದೆ.ಈ ದಾರಿಯು ದುರ್ಗಮವಾಗಿದೆ ಎಂಬುದು ಮಾತ್ರ ವಾಸ್ತವ."[4] ಇತ್ತೀಚೆಗೆ ನಿರ್ಮಾಣವಾಗುತ್ತಿರುವ ಸಿನಿಮಾಗಳು ಗುಣಮಟ್ಟದಿಂದ ಕೂಡಿಲ್ಲ ಎಂಬ ಬೇಸರ ಲೇಖಕರ ಮಾತಿನಲ್ಲಿದೆ.

**ಸ್ವಂತ ಅಥವಾ ಸ್ವಮೇಕ್ ಸಿನಿಮಾಗಳ ನಿರ್ಮಾಪಕರು:**

2003 ರಲ್ಲಿ ಸಿನಿಮಾ ವಿತರಣೆಯನ್ನು ಆರಂಭಿಸಿದ ಜಯಣ್ಣ ಅವರು 2008 ರಲ್ಲಿ ಸಿನಿಮಾ ನಿರ್ಮಾಣಕ್ಕೂ ಕೈ ಹಾಕಿ ಯಶಸ್ವಿಯಾದರು. 2008 ರ ಆಗಸ್ಟ್ 15 ರಂದು ತೆರೆಕಂಡ ದರ್ಶನ್ ಅವರ ಅಭಿನಯದ 'ಅರ್ಜುನ್' ಜಯಣ್ಣ ಅವರು ನಿರ್ಮಾಣ ಮಾಡಿದ ಮೊದಲ ಸಿನಿಮಾ 'ಅರ್ಜುನ್' ಸಿನಿಮಾ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗದಿದ್ದರೂ 'ಜಯಣ್ಣ ಕಂಬೈನ್ಸ್' ಗೆ ಒಂದು ಗುರುತನ್ನು ತಂದು ಕೊಟ್ಟಿತು. 2003 ರಿಂದ 2021 ರ ವರೆಗೆ ನಿರ್ಮಾಣ ಮಾಡಿದ ಹತ್ತೊಂಬತ್ತು ಸಿನಿಮಾಗಳು ಸಹ ಸ್ವಮೇಕ್ ಸಿನಿಮಾಗಳೇ ಆ ಹದಿನೆಂಟು ಸಿನಿಮಾಗಳೆಂದರೆ,

| ಕ್ರ. ಸಂ. | ಸಿನಿಮಾ | ವರ್ಷ | ನಿರ್ದೇಶಕ | ನಾಯಕ |
|---|---|---|---|---|
| 01 | ಅರ್ಜುನ್ | 2008 | ಶಾಹುರಾಜ್ ಶಿಂದೆ | ದರ್ಶನ್ |
| 02 | ಜಾನಿ ಮೇರಾ ನಾಮ್ ಪ್ರೀತಿ ಮೇರಾ ಕಾಮ್ | 2011 | ಪ್ರೀತಂ ಗುಬ್ಬಿ | ವಿಜಯ್ |
| 03 | ಪರಮಾತ್ಮ | 2011 | ಯೋಗರಾಜ್ ಭಟ್ | ಪುನೀತ್ ರಾಜ್‌ಕುಮಾರ್ |
| 04 | ಜಾನು | 2012 | ಪ್ರೀತಂ ಗುಬ್ಬಿ | ಯಶ್ |
| 05 | ಡ್ರಾಮ | 2012 | ಯೋಗರಾಜ್ ಭಟ್ | ಯಶ್ |
| 06 | ಗೂಗ್ಲಿ | 2013 | ಪವನ್ ಒಡೆಯರ್ | ಯಶ್ |
| 07 | ದ್ಯಾವ್ರೇ | 2013 | ಗಡ್ಡವಿಜ್ಜಿ | ಸತೀಶ್‌ನೀನಾತಂ |
| 08 | ಗಜಕೇಸರಿ | 2014 | ಕೃಷ್ಣ | ಯಶ್ |
| 9 | ಮಿ. ಅಂಡ್ ಮಿಸಸ್. ರಾಮಚಾರಿ | 2014 | ಸಂತೋಷ್ ಆನಂದರಾವ್ | ಯಶ್ |
| 10 | ರಣವಿಕ್ರಮ | 2015 | ಪವನ್ ಒಡೆಯರ್ | ಪುನೀತ್ ರಾಜಕುಮಾರ್ |

| | | | | |
|---|---|---|---|---|
| 11 | ಬುಲೆಟ್ ಬಸ್ಯಾ | 2015 | ಜಯತೀರ್ಥ | ಶರಣ್ |
| 12 | ಬಾಕ್ಸರ್ | 2015 | ಪ್ರೀತಂ ಗುಬ್ಬಿ | ಧನಂಜಯ |
| 13 | ಜೈ ಮಾರುತಿ 800 | 2016 | ಹರ್ಷ ಎ | ಶರಣ್ |
| 14 | ನಾನು ಮತ್ತು ವರಲಕ್ಷ್ಮೀ | 2016 | ಪ್ರೀತಂ ಗುಬ್ಬಿ | ಪೃಥ್ವಿ |
| 15 | ಬಂಗಾರ ಸನ್ ಆಫ್ ಬಂಗಾರದ ಮನುಷ್ಯ | | ಯೋಗಿ ಜಿ. ರಾವ್ | ಡಾ. ಶಿವರಾಜ್ ಕುಮಾರ್ |
| 16 | ಸಾಹೇಬ | 2017 | ಭರತ್ ಮನೋರಂಜನ್ | ರವಿಚಂದ್ರನ್ |
| 17 | ಮಫ್ತಿ | 2017 | ನರ್ತನ್ | ಡಾ. ಶಿವರಾಜ್ ಕುಮಾರ್ ಮುರಳಿ |
| 18 | ರುಸ್ತುಂ | 2019 | ರವಿವರ್ಮ | ಡಾ. ಶಿವರಾಜ್ ಕುಮಾರ್ |
| 19 | ಭಜರಂಗಿ | 2021 | ಎ. ಹರ್ಷ | ಡಾ. ಶಿವರಾಜ್ ಕುಮಾರ್ |

ಜಯಣ್ಣ ಅವರ ಸಿನಿಮಾ ನಿರ್ಮಾಣಕ್ಕೆ ಇಳಿದ ಅವಧಿಯಲ್ಲಿ ಅವರಿಗಿಂತ ಹಿಂದೆ ಚಲನಚಿತ್ರರಂಗದಲ್ಲಿ ಸಿನಿಮಾ ನಿರ್ಮಾಣದಲ್ಲಿ ಹೆಸರು ಮಾಡಿದ ರಾಮು, ಕೆ. ಮಂಜು, ರಾಕ್‌ಲೈನ್ ವೆಂಕಟೇಶ್, ದ್ವಾರಕೀಶ್ ಮೊದಲಾದವರು 2003 ರಿಂದ 2021 ರ ಅವಧಿಯಲ್ಲಿ ನಿರ್ಮಿಸಿದ ಬಹುತೇಕ ಸಿನಿಮಾಗಳು ರಿಮೇಕ್ ಸಿನಿಮಾಗಳು. ಅದರಲ್ಲೂ ರಾಕ್ ಲೈನ್ ವೆಂಕಟೇಶ್, ಎಸ್. ನಾರಾಯಣ್, ರವಿಚಂದ್ರನ್, ಮುನಿರತ್ನ, ದ್ವಾರಕೀಶ್‌ರವರಿಗೆ ಸಿನಿಮಾದ ಕಥೆ ಅತ್ಯುತ್ತಮವಾಗಿರುವುದರ ಜೊತೆಗೆ ಸಿನಿಮಾವು ಸಹ ಉತ್ತಮ ಸಂಪಾದನೆ ಮಾಡಬೇಕು ಎಂಬ ಕಾರಣದಿಂದ ರಿಮೇಕ್ ಸಿನಿಮಾಗಳನ್ನು ಈ ಅವಧಿಯಲ್ಲಿ ನಿರ್ಮಾಣ ಮಾಡಿದರು.2000 ನೇ ಇಸವಿಯ ನಂತರ ಕನ್ನಡ ಚಲನಚಿತ್ರರಂಗದ ಬೆಳವಣಿಗೆಗೆ ಕುಂಠಿತವಾಯಿತು. ಪರಭಾಷಾ ಚಿತ್ರಗಳ ಹಾವಳಿ, ಟಿ. ವಿ. , ಮೊಬೈಲ್ ಮಾಧ್ಯಮಗಳ ಪೈಪೋಟಿ, ಚಲನಚಿತ್ರ ಮಂದಿರಗಳ ಸಮಸ್ಯೆಯಿಂದ ನಲುಗಿಹೋಯಿತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ತಾವು ನಿರ್ಮಿಸಿದ ಎಲ್ಲಾ ಸಿನಿಮಾಗಳನ್ನು ಸ್ವಂತ ಕತೆಯೇ ಆಧಾರದ ಮೇಲೆ ನಿರ್ಮಾಣ ಮಾಡಿದ್ದು ಜಯಣ್ಣ ಅವರ ಹೆಚ್ಚುಗಾರಿಕೆ.

**ಯಶಸ್ವಿ ವಿತರಕರಾಗಿ ಜಯಣ್ಣ:**

ಚಂದ್ರಚಕೋರಿ ಸಿನಿಮಾದ ವಿತರಣೆಯ ಮೂಲಕ ಚಲನಚಿತ್ರರಂಗ ಪ್ರವೇಶಿಸಿದ ಜಯಣ್ಣ ಅವರು ಅನಂತರ ಅವರ ವಿತರಣೆ ಮಾಡಿದ 'ದಾಸ',

‘ಅಯ್ಯ’, ‘ಭೂಪತಿ’, ‘ಶಾಸ್ತ್ರಿ’, ‘ಸ್ನೇಹನಾ ಪ್ರೀತಿನಾ’ ‘ಜೊತೆ ಜೊತೆಯಲ್ಲಿ’, ‘ಮುಂಗಾರು ಮಳೆ’ ,‘ದುನಿಯಾ’ ಹಾಗೂ ‘ಗಜ’ ಹಾಗೂ ‘ಪಲ್ಲಕ್ಕಿ’ ಸಿನಿಮಾಗಳು ಬಾಕ್ಸ್ ಆಫಿಸ್‌ನಲ್ಲಿ ಅದ್ಭುತ ಗಳಿಕೆ ಮಾಡಿದವು.

ಅದರಲ್ಲೂ 2007 ರಲ್ಲಿ ಅವರ ವಿತರಣೆ ಮಾಡಿದ ‘ಮುಂಗಾರು ಮಳೆ’ ಹಾಗೂ ‘ದುನಿಯಾ’ ಸಿನಿಮಾಗಳು ಗಲ್ಲಾಪೆಟ್ಟಿಗೆಯನ್ನು ಚಿಂದಿ ಉಡಾಯಿಸಿದವು. ‘ಮುಂಗಾರು ಮಳೆ’ ಹಾಗೂ ‘ದುನಿಯಾ’ ಸಿನಿಮಾಗಳ ಗಳಿಕೆ ಇಂದಿಗೂ ಸಾರ್ವಕಾಲಿಕ ದಾಖಲೆ. ಒಂದು ಸಿನಿಮಾ ನಿರ್ಮಾಣ ಮಾಡುವುದು ಎಷ್ಟು ಕಷ್ಟಕರವಾದ ಕೆಲಸವೋ, ಹಾಗೆಯೇ ವಿತರಣೆ ಮಾಡಿ ಯಶಸ್ವಿಯಾಗುವುದು ಅಷ್ಟೇ ಕಷ್ಟಕರವಾದ ಕೆಲಸ. ಅದರಲ್ಲೂ ಪರಭಾಷಾ ಚಿತ್ರಗಳ ಪೈಪೋಟಿ, ಸೀಮಿತ ಮಾರುಕಟ್ಟೆ ವ್ಯಾಪ್ತಿ ಇರುವ ಕನ್ನಡ ಚಲನಚಿತ್ರ ರಂಗದಲ್ಲಿ ಸಿನಿಮಾಗಳು ಯಶಸ್ವಿಯಾಗುವುದು ಸುಲಭದ ಮಾತಲ್ಲ. ಬಹುತೇಕ ಸಂದರ್ಭದಲ್ಲಿ ಸಿನಿಮಾ ಉತ್ತಮವಾಗಿದ್ದರು ಅನಾರೋಗ್ಯಯುತ ಪೈಪೋಟಿ, ವಿತರಣೆಯ ತಾಂತ್ರಿಕ ತೊಂದರೆಗಳಿಂದ ಉತ್ತಮ ಸಿನಿಮಾಗಳು ಸಹ ಯಶಸ್ವಿಯಾಗುವುದಿಲ್ಲ. ಜಯಣ್ಣ ಅವರು ವಿತರಣೆ ಮಾಡಿರುವ ಸಾಕಷ್ಟು ಸಿನಿಮಾಗಳು ಅದರಲ್ಲೂ ಹೊಸಬರ ಸಿನಿಮಾಗಳು ಬೇರೆ ಭಾಷೆಯ ಬಿಗ್‌ಬಜೆಟ್ ಸಿನಿಮಾಗಳಿಗೆ ಸವಾಲೊಡ್ಡಿರುವ ಸಾಕಷ್ಟು ಉದಾಹರಣೆಗಳಿವೆ. ತೆಲುಗಿನ ಬಹುಬಜೆಟ್ ಸಿನಿಮಾ ‘ಬಾಹುಬಲಿ–01’ ಕನ್ನಡದ ‘ರಂಗಿತರಂಗ’ ಸಿನಿಮಾಗೆ ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ. ‘ಬಾಹುಬಲಿ–02’ ಸಿನಿಮಾವು ಸಹ ರಾಜಕುಮಾರ ಸಿನಿಮಾದ ಎದುರಿಗೆ ನಿಲ್ಲಲು ಸಾಧ್ಯವಾಗಲಿಲ್ಲ. ಯಾವುದೇ ಕಾರ್ಯದಲ್ಲೂ ಸೋಲು ಗೆಲುವು ಸಹಜ, ಜಯಣ್ಣ ಅವರು ವಿತರಣೆ ಮಾಡಿರುವ ಕೆಲವು ಸಿನಿಮಾಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗದಿರಬಹುದು. ಆದರೆ, ಅವರು ವಿತರಣೆ ಮಾಡಿರುವ ಎಲ್ಲಾ ಸಿನಿಮಾಗಳು ಕನ್ನಡ ಸಿನಿಮಾಗಳು ಈ ಹಿನ್ನೆಲೆಯಲ್ಲಿ ಜಯಣ್ಣ ಅವರ ಕನ್ನಡ ಪ್ರೇಮವನ್ನು ನಾವು ಮೆಚ್ಚಲೇಬೇಕು.

**ಹೊಸ ಅಲೆಯ ಹರಿಕಾರರು:**

ಜಯಣ್ಣ ಅವರ ಸಂಸ್ಥೆಯ ಮತ್ತೊಂದು ಹೆಚ್ಚುಗಾರಿಕೆಯೆಂದರೆ ಹೊಸಬರಿಗೆ ಹೆಚ್ಚಿನ ಅವಕಾಶಗಳನ್ನು ನೀಡಿದ್ದು, ಹೊಸಹೊಸ ನಾಯಕ ನಿರ್ದೇಶಕರ ಮೇಲೆ ನಂಬರ್ ಇಟ್ಟು ಕೋಟಿ ಕೋಟಿ ಹಣವನ್ನು ಸಿನಿಮಾ ನಿರ್ಮಾಣಕ್ಕೆ ಸುರಿದವರು ಜಯಣ್ಣ. ಬೊಗೇಂದ್ರ ಸ್ನೇಹಿತರು ತಾವು ನಿರ್ಮಾಣ ಮಾಡಿದ ಸಿನಿಮಾಗಳಲ್ಲಿ ಹೊಸಬರಿಗೆ ಅವಕಾಶ ನೀಡಿದ್ದು ಅವರ ವ್ಯಕ್ತಿತ್ವದ ಹೆಚ್ಚುಗಾ–

ರಿಕೆ.ಪೃಥ್ವಿ, ಮನೋರಂಜನ್, ರವಿಚಂದ್ರನ್ ಅವರನ್ನು ನಾಯಕ ನಟರಾಗಿ ಬೆಳ್ಳಿ ತೆರೆಗೆ ಪರಿಚಯಿಸಿದರು. ಗಡ್ಡವಿಜಿ, ಕೃಷ್ಣ, ಸಂತೋಷ್ ಆನಂದರಾಮ್, ನರ್ತನ್ ಇವರುಗಳಿಗೆ ಸಿನಿಮಾ ನಿರ್ದೇಶನ ಮಾಡಲು ಅವಕಾಶ ಕೊಟ್ಟಿದ್ದು ಜಯಣ್ಣ ಅವರೇ.ಯಶ್, ನೀನಾಸಂ ಸತೀಶ್‌ರವರು ಯಶಸ್ವಿ ನಾಯಕ ನಟರಾಗಿ ಗುರುತಿಸಿಕೊಂಡಿದ್ದು, ಇವರ ನಿರ್ಮಾಣದ ಸಿನಿಮಾಗಳಲ್ಲಿ ಅಭಿನಯಿಸಿದ ನಂತರ ಕಾಲದಲ್ಲಿ ಅದರಲ್ಲೂ, ಯಶ್‌ರವರು ಕನ್ನಡ ಚಿತ್ರರಂಗದ ಯಶಸ್ವಿ ನಟರಾಗಲು ಕಾರಣರಾದವರು ಜಯಣ್ಣ ಅವರೇ. ಯಾಕೆಂದರೆ ಜಯಣ್ಣ ಅವರ ನಿರ್ಮಾಣದ ಐದು ಸಿನಿಮಾಗಳಲ್ಲಿ ಯಶ್ ನಾಯಕ ನಟರಾಗಿ ನಟಿಸಿದ್ದಾರೆ. 2012 ರಲ್ಲಿ 'ಜಾನು' ಸಿನಿಮಾ ಸೋತ ನಂತರವೂ ಡ್ರಾಮ ಸಿನಿಮಾದಲ್ಲಿ ನಾಯಕ ನಟ–ರಾಗಿ ಅಭಿನಯಿಸಲು ಯಶ್ ಅವರಿಗೆ ಅವಕಾಶ ದೊರೆಯಿತು. ಏಕೆಂದರೆ, ಡ್ರಾಮ ಸಿನಿಮಾದಲ್ಲಿ ಯಶ್ ಅವರಿಗೆ ಅವಕಾಶ ದೊರೆಯದಿದ್ದರೆ ಬಹುಶಃ ಇಷ್ಟು ಯಶಸ್ವಿ ನಾಯಕರಾಗುತ್ತಿರಲಿಲ್ಲ. ಮುಂದೆ ಅವರ ನಿರ್ಮಾಣದ 'ಗಜಕೇಸರಿ', 'ರಾಮಾಚಾರಿ', 'ಗೂಗ್ಲಿ' ಸಿನಿಮಾಗಳಲ್ಲಿ ನಟಿಸಿದರು.

**ತಾಂತ್ರಿಕ ಶ್ರೀಮಂತರು:**

ಜಯಣ್ಣ ಅವರು ನಿರ್ಮಾಣ ಮಾಡಿರುವ ಎಲ್ಲಾ ಸಿನಿಮಾಗಳು ತಾಂತ್ರಿಕ ಶ್ರೀಮಂತಿಕೆಯಿಂದ ಕೂಡಿವೆ. ಅದರಲ್ಲೂ ಛಾಯಾಗ್ರಹಣ ವಿಭಾಗದಲ್ಲಿ ಅವರ ಸಿನಿಮಾಗಳು ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದವು. 'ಗೂಗ್ಲಿ''ರಣವಿಕ್ರಮ' ಸಿನಿಮಾಗಳ ಛಾಯಾಗ್ರಹಣ ಅತ್ಯುತ್ತಮವಾಗಿದೆ.ಈ ಎರಡು ಸಿನಿಮಾಗಳಿಗೆ ಛಾಯಾಗ್ರಹಣ ಮಾಡಿರುವ ಛಾಯಾಗ್ರಾಹಕ ಎಸ್. ವೈದಿ ಅವರ ಶ್ರಮ ಸಿನಿಮಾದಲ್ಲಿ ಎದ್ದು ಕಾಣುತ್ತಿದೆ. ರಣವಿಕ್ರಮ, ಮಫ್ತಿ, ಸಿನಿಮಾದ ಹೊಡೆದಾಟದ ದೃಶ್ಯಗಳು ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದವು.

**ಉಪಸಂಹಾರ:**

ಒಟ್ಟಾರೆ ಹೇಳುವುದಾದರೆ, ಕನ್ನಡ ಚಿತ್ರರಂಗಕ್ಕೆ ಜಯಣ್ಣ ಅವರ ಕೊಡುಗೆ ಮಹತ್ವ ಪೂರ್ಣವಾದದ್ದು.ಅವರ ಕನ್ನಡ ಪ್ರೀತಿ, ಅತಿಶಯ, ಅನುಪಮ. ಏಕೆಂದರೆ, ಗಾರೆ ಕೆಲಸ ಮಾಡುವ ವ್ಯಕ್ತಿಯು ಕೂಡ ತನ್ನ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಬೇಕೆಂದು ಬಯಸುತ್ತಾನೆ. ಆದರೆ, ಜಯಣ್ಣ ಅವರಂತಹ ಹೃದಯ ಶ್ರೀಮಂತರು ತಾವು ನಿರ್ಮಾಣ ಮಾಡಿದ, ವಿತರಣೆ ಮಾಡಿದ ಎಲ್ಲಾ ಸಿನಿಮಾಗಳು ಕನ್ನಡ ಸಿನಿಮಾಗಳೇ ಆಗಿವೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಎಷ್ಟೇ ಪರಿಚಯವಿದ್ದರೂ ಹತ್ತು ರೂಪಾಯಿ ಸಾಲ ಕೊಡಲು ಹಿಂಜರಿಯುವ ಈ ಕಾಲದಲ್ಲಿ

ಜಯಣ್ಣ ಅವರು ಹೊಸ ಹೊಸ ನಾಯಕ, ನಾಯಕಿ, ತಂತ್ರಜ್ಞರನ್ನು ನಂಬಿ ಕೋಟಿ ಕೋಟಿ ಹಣ ಸುರಿದು ಸಿನಿಮಾ ನಿರ್ಮಾಣ ಮಾಡಿದ್ದಾರೆ. ಇದು ಅವರ ಹೃದಯ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ.ನನ್ನ ಅಭಿಪ್ರಾಯದಲ್ಲಿ ಒಂದು ಭಾಷೆಯ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಾಧನಗಳಲ್ಲಿ ಸಿನಿಮಾವು ಸಹ ಒಂದು, ಆ ಮೂಲಕ ಆ ಸಿನಿಮಾದಲ್ಲಿ ದುಡಿಯುವ ವ್ಯಕ್ತಿಗಳು ಭಾಷೆಯ ಉಳಿವಿಗಾಗಿ ಚಿತ್ರರಂಗದಲ್ಲಿ ದುಡಿಯುವ ವ್ಯಕ್ತಿಗಳು ಶ್ರಮಿಸುತ್ತಾರೆ.ಅಂತಹ ವ್ಯಕ್ತಿಗಳಲ್ಲಿ ಜಯಣ್ಣ – ಬೊಗೇಂದ್ರ ಅವರು ಅಗ್ರಗಣ್ಯರಾಗಿ ನಿಲ್ಲುತ್ತಾರೆ.ಅವರ ಕನ್ನಡ ಪ್ರೇಮ ನಿರಂತರವಾಗಿರಲಿ. ರಾಷ್ಟ್ರಕವಿ ಕುವೆಂಪು ಅವರು ಹೇಳಿರುವ ಹಾಗೆ **"ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ"** ಎನ್ನುವ ಕುವೆಂಪು ಅವರ ಕವಿವಾಣಿಯಂತೆ ಕನ್ನಡದ ಏಳಿಗೆಗಾಗಿ ಶ್ರಮಿಸುತ್ತಿರುವ ಜಯಣ್ಣ – ಬೊಗೇಂದ್ರ ಅವರಿಂದ ಕನ್ನಡ ಚಿತ್ರರಂಗದ ಪಯಣ ಯಶಸ್ಸಿನತ್ತ ಸಾಗಲಿ ಎಂಬುದು ಅವರ ಅಭಿಮಾನಿಗಳ ಆಶಯವಾಗಿದೆ. ಸೂರಿ ಅವರಂತಹ ಸೃಜನಶೀಲ ನಿರ್ದೇಶಕರಿಗೆ ಅವರ ಸಂಸ್ಥೆಯಲ್ಲಿ ನಿರ್ದೇಶನ ಮಾಡಲು ಅವಕಾಶ ನೀಡದಿರುವುದು ನನಗಂತೂ ಸೋಜಿಗವನ್ನುಂಟು ಮಾಡಿದೆ.

**ಕೊನೆ ಟಿಪ್ಪಣಿಗಳು :**

1. ಮುಖ್ಯಮಂತ್ರಿ ಚಂದ್ರು, ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು (2016), ಪು.ಸಂ. 136.
2. ಪೂರ್ಣಚಂದ್ರ ತೇಜಸ್ವಿ ಕೆ. ಪಿ., ಹೊಸ ವಿಚಾರಗಳು (2022), ಪು.ಸಂ. 308.
3. ಶಿವಾರೆಡ್ಡಿ ಕೆ. ಸಿ., ಕುವೆಂಪು (2020), ಪು.ಸಂ. 51.
4. ಮೊಗಳ್ಳಿ ಗಣೇಶ್, ಕನ್ನಡ ಚಲನಚಿತ್ರ ಇತಿಹಾಸ: ಭಾಗ–01 (2011), ಪು.ಸಂ. 83.

**ಪರಾಮರ್ಶನ ಗ್ರಂಥಗಳು:**


1. ಕುವೆಂಪು, ಸಮಗ್ರ ಕಾವ್ಯ ಸಂಪುಟ–01 (2016), ಉದಯರವಿ ಪ್ರಕಾಶನ, ಮೈಸೂರು.
2. ಮುಖ್ಯಮಂತ್ರಿ ಚಂದ್ರು (ಸಂ), ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು (2011). ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
3. ಮೊಗಳ್ಳಿ ಗಣೇಶ (ಸಂ), ಕನ್ನಡ ಚಲನಚಿತ್ರ ಇತಿಹಾಸ: ಭಾಗ–01 (2011), ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.